**OS-275/2018 P.W.1**

ದಿನಾಂಕಃ 05.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು :</u>** 4 ನೇ ಪ್ರತಿವಾದಿಯ ಪರ ವಕೀಲರಿಂದ ಃ-

ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಏಕೆಂದರೆ ನಾನು 3 ನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿ 1 ಮತ್ತು 2 ರ ಆಸ್ತಿಗಳನ್ನು ತಮ್ಮ ತಂದೆ ಯಾವತ್ತು ಸಹ ಬೇಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಮತ್ತು 2 ರ ಆಸ್ತಿಗಳನ್ನು ಪ್ರತಿವಾದಿಯ ತಂದೆಯಾದ ರೇವಣ ಸಿದ್ದಪ್ಪ ಬೇಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ನಾವು ಮತ್ತು ಅವರು ಒಟ್ಟಿಗೆ ಬೇಸಾಯ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ತಾವು ತಮ್ಮ ತಂದೆಯ ಮುಖವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹುಟ್ಟಿದಾಗಿನಿಂದ ನಮ್ಮ ತಂದೆ ತಮ್ಮ ಜೊತೆಯಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 1 ಮತ್ತು 2 ರ ಆಸ್ತಿಗಳು ತಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಅಲ್ಲ, ಸದರಿ ಆಸ್ತಿಗಳನ್ನು ಪ್ರತಿವಾದಿಯ ತಂದೆ ರೇವಣ ಸಿದ್ದಪ್ಪ ರವರಿಗೆ ಗೇಣಿ ಮುಖಾಂತರ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ 3 ರ ಸ್ವತ್ತನ್ನು 4 ನೇ ಪ್ರತಿವಾದಿ ಅವರ ಸ್ವಂತ ಸಂಪಾದನೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ 4 ರಿಂದ 7 ಕ್ಕೆ ಸಂಬಂಧಪಟ್ಟಂತೆ ತಮ್ಮ ತಂದೆ ಹಿಸ್ಸಾ ಬಾಬ್ತು ಹಣ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಬಹಳ ವರ್ಷಗಳಿಂದ ತಾವು ಮತ್ತು ಪ್ರತಿವಾದಿಯ ನಡುವೆ ಒಟ್ಟು ಕುಟುಂಬದ ಅಸ್ತಿತ್ವ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ತಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**OS-275/2018 P.W.1**

**<u>ಪಾಟೀ ಸವಾಲು :</u>** 2, 3 ಮತ್ತು 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಿಂದ :-

2, 3 ಮತ್ತು 5 ರಿಂದ 7 ನೇ ಪ್ರತಿವಾದಿಗಳು ಮತ್ತು ಸದರಿ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಾಗಿರುವ ಕಾರಣ, ಸಾಕ್ಷಿಯ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.